ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಾಂಡ್ ಯೋಜನೆಯಲ್ಲಿ ಸಂಗ್ರಹಿಸಿದ ಹಣ

1379 (1653) ಶ್ರೀ ವಿ.ಸಿ ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾನಗರ ಪಾಲಿಕೆಯಲ್ಲಿ ಬಾಂಡ್ ಮೂಲಕ ಹಣ ಸಂಗ್ರಹಿಸುವ ಬಾಂಡ್ ಯೋಜನೆ ಅಸ್ತಿತ್ವದಲ್ಲಿದೆಯೇ?

ಆ) ಯಾವಾಗಿನಿಂದ ಚಾಲ್ತಿಗೆ ತರಲಾಗಿದೆ. ಈ ರೀತಿಯ ಸಂಗ್ರಹಕ್ಕೆ ಕಾರಣಗಳೇನು ಯಾವ ಯಾವ ಯೋಜನೆ ಕಾಮಗಾರಿಗಳಿಗಾಗಿ ಇದನ್ನು ರೂಪಿಸಲಾಗಿದೆ;

ಇ) ಇದುವರೆಗೂ ಈ ರೀತಿ ಎಷ್ಟು ಹಣವನ್ನು ಬಾಂಡ್ ಮೂಲಕ ಸಂಗ್ರಹಿಸಲಾಗಿದೆ; (ವರ್ಷವಾರು ಬಾಂಡ್‌ಗಳಿಂದ ಸಂಗ್ರಹವಾದ ಮೊತ್ತ ಸಹಿತವಾದ ವಿವರ ಒದಗಿಸುವುದು;

ಈ) ಸಂಗ್ರಹಿಸಲ್ಪಟ್ಟಿರುವ ಹಣಕ್ಕೆ ನೀಡಲಿರುವ ಬಡ್ಡಿ ಮೊತ್ತವೆಷ್ಟು?

ಉ) ಉದ್ದೇಶಿತ ಯೋಜನೆಗಳಿಗೆ ಸಂಗ್ರಹಿಸಿದ ಹಣ ಖರ್ಚಾಗದೇ ಬಾಕಿ ಉಳಿದಿರುವ ಪ್ರಕರಣ ಬೆಳಕಿಗೆ ಬಂದಿದೆಯೇ?

ಊ) ಈಗಾಗಲೇ ನೀಡಿರುವ ಬಡ್ಡಿ ಹಣವೆಷ್ಟು? ಸಂಗ್ರಹಿಸಿದ ಹಣಕ್ಕಿಂತ ಬಡ್ಡಿಯು ಜಾಸ್ತಿ ಎಂದು ಸರ್ಕಾರ ಭಾವಿಸುವುದಿಲ್ಲವೇ ಪಾಲಿಕೆಗೆ ಈ ನಷ್ಟ ಏಕೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಅಸ್ತಿತ್ವದಲ್ಲಿತ್ತು.

ಆ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆರ್ಟೀರಿಯಲ್ ಮತ್ತು ಸಬ್‌ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿಗಾಗಿ ದಿನಾಂಕ: 31.12.97 ರಿಂದ ಬಾಂಡ್ ಯೋಜನೆಯನ್ನು ಜಾರಿಗೆ ತರಲಾಯಿತು.

ಇ) 1997 ರಲ್ಲಿ ಮಾತ್ರ ವಿವಿಧ ಸಂಸ್ಥೆಗಳಿಂದ ರೂ. 125.00 ಕೋಟಿಗಳನ್ನು ಸಂಗ್ರಹಿಸಲಾಗಿದೆ. ನಂತರ ಯಾವುದೇ ವಿಧವಾದ ಮೊತ್ತವನ್ನು ಬಾಂಡ್ ಮೂಲಕ ಸಂಗ್ರಹಿಸಿರುವುದಿಲ್ಲ.

ಈ) ದಿನಾಂಕ: 01.01.98 ರಿಂದ 31.12.2002 ಅಂತ್ಯದವರೆಗೆ ರೂ. 91.24 ಕೋಟಿಗಳನ್ನು ಬಡ್ಡಿ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ.

ಉ) ಈ ಯೋಜನೆಯಲ್ಲಿ ಸಂಗ್ರಹಿಸಿದ ಪೂರ್ಣ ಮೊತ್ತವನ್ನುಉದ್ದೇಶಿತ ಯೋಜನೆಗೆ ಬಳಸಲಾಗಿದೆ.

ಊ) ಇಲ್ಲಿಯವರೆವಿಗೆ ರೂ. 78 ಕೋಟಿಗಳನ್ನು ಬಡ್ಡಿ ರೂಪದಲ್ಲಿ ಹಣ ದೂಡಿಕೆದಾರರಿಗೆ ಪಾವತಿಸಲಾಗಿದೆ. ಬಾಂಡ್‌ಗಳ ಮೂಲಕ ಉದ್ದೇಶಿತ ಯೋಜನೆಗೆ ಹಣ ಸಂಗ್ರಹಣೆ ಮಾಡಿದ ಸಮಯದಲ್ಲಿ ಈ ಹಣಕ್ಕೆ ನೀಡುವ ಬಡ್ಡಿಯು ದುಬಾರಿಯಾಗಿರುವುದಿಲ್ಲ. ಈ ಯೋಜನೆಯಲ್ಲಿ ಸಂಗ್ರಹಿಸಿದ ಹಣವನ್ನು ಉದ್ದೇಶಿತ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿರುವುದರಿಂದ ಇದನ್ನು ನಷ್ಟವೆಂದು ಪರಿಗಣಿಸಲಾಗುವುದಿಲ್ಲ.